**ದಿಃ06.08.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎನ್.ಜಿ.ವಿ ವಕೀಲರಿಂದ ಃ**

ನಾನು ಈ ದಾವೆಯನ್ನು ಪಿ.ಪೆರಾಜೆ ಗ್ರಾಮ ಸರ್ವೆ ನಂ.356/151 2.30 ಎಕರೆ ಸಂಬಂಧ ಈ ದಾವೆಯನ್ನು ಹೂಡಿದ್ದೇನೆ. ಸದರಿ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿದ್ದಾರೆ. ನನ್ನ ತಂದೆಯ ಹೆಸರು ಚೆಂಗಪ್ಪ. ಸದರಿಯವರು ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ಒಟ್ಟು 9 ಜನ ಮಕ್ಕಳು. ಅವರುಗಳಲ್ಲಿ 4 ಜನ ಗಂಡು ಮಕ್ಕಳು ಮತ್ತು 5 ಜನ ಹೆಣ್ಣು ಮಕ್ಕಳು. ನನ್ನ ಸಹೋದರ ಸಹೋದರಿಯರ ಪೈಕಿ ನನ್ನ ಅಣ್ಣ ಶಿವರಾಮ ತೀರಿಕೊಂಡಿರುತ್ತಾರೆ. ನನ್ನ ಸಹೋದರ ಶಿವರಾಮ ಇವರಿಗೆ ವಾರಸುದಾರರು ಇದ್ದಾರೆ. ದಾವಾ ಸ್ವತ್ತಿನ ಸಂಬಂಧ ನನ್ನ ಮತ್ತು ನನ್ನ ಸಹೋದರರ ನಡುವೆ ಪಾಲಾಗಿದೆ. ಸಾಕ್ಷಿ ಮುಂದುವರೆದು ಮೌಖಿಕವಾಗಿ ನಾನು ಮತ್ತು ನನ್ನ ಸಹೋದರ ಸಹೋದರಿಯವರು ಹಿಸ್ಸೆ ಮಾಡಿಕೊಂಡಿದ್ದೇವೆ ಎನ್ನುತ್ತಾರೆ. ನನ್ನ ಕುಟುಂಬದಲ್ಲಿ ಆದ ಹಿಸ್ಸೆ ಸಂಬಂಧ ಬರವಣಿಗೆ ಆಗಿದೆ. ನನ್ನ ಕುಟುಂಬದಲ್ಲಿ 1986-87 ರಲ್ಲಿ ಹಿಸ್ಸೆ ಆಗಿರಬಹುದು. ನನ್ನ ಕುಟುಂಬದಲ್ಲಿ ಆಗಿರುವ ಪಾಲು ವಿಗಂಡಣೆ ಸಂಬಂಧ ದಾಖಲೆ ಇದೆ. ಅದನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಲು ನನಗೇನೂ ಅಭ್ಯಂತರ ಇಲ್ಲ. ವಿಭಾಗ ಪತ್ರದ ಆಧಾರದ ಮೇಲೆ ಆಸ್ತಿಗಳ ಖಾತೆ ವರ್ಗಾವಣೆ ಆಗಿಲ್ಲ. ಈ ದಾವೆಯ ದಾವಾ ಸ್ವತ್ತು ವಿಭಾಗ ಪತ್ರದಲ್ಲಿ ನನ್ನ ಹಿಸ್ಸೆಗೆ ಮಾತ್ರ ಬಂದಿದೆ. ಈ ದಾವೆಯ 2ನೇ ವಾದಿ ನನ್ನ ಸಹೋದರ. 2ನೇ ವಾದಿ ಹಿಸ್ಸೆಗೆ ದಾವಾ ಸ್ವತ್ತಿನ ಯಾವುದೇ ಭಾಗ ವಿಭಾಗ ಪತ್ರದ ಪ್ರಕಾರ ಹೊಗಿಲ್ಲ. ಸಾಕ್ಷಿ ಮುಂದುವರೆದು ದಾವಾ ಸ್ವತ್ತಿನ ಆರ್.ಟಿ.ಸಿಯ 6ನೇ ಕಲಂ

ನಲ್ಲಿ 2ನೇ ವಾದಿಯ ಹೆಸರು ನಮೂದು ಆಗಿರುವುದರಿಂದ ಆತನನ್ನು ಈ ದಾವೆಯಲ್ಲಿ ಪಕ್ಷಗಾರನನ್ನಾಗಿ ಮಾಡಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತಿನ ಮಾಲೀಕತ್ವವನ್ನು ನಾನು ವಿಭಾಗ ಪತ್ರದ ಆಧಾರದ ಮೇಲೆ ಕೇಳಿದ್ದೇನೆ. ವಿಭಾಗ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದರೆ ನಾನು ಹೇಳುತ್ತಿರುವ ವಿಚಾರ ಅದರಲ್ಲಿ ಉಲ್ಲೇಖ ಇದೆ. ವಿಭಾಗ ಪತ್ರ ನನ್ನ ಮತ್ತು ಸಹೋದರರ ನಡುವೆ ಆಗಿದೆ. ಸದರಿ ವಿಭಾಗ ಪತ್ರಕ್ಕೆ ಜಿತೇಂದ್ರ ಮತ್ತು ನನ್ನ ಚಿಕ್ಕಪ್ಪಂದಿರು ಸಾಕ್ಷಿದಾರರು. ಸಾಕ್ಷಿ ಮುಂದುವರೆದು ವಿಭಾಗ ಪತ್ರ ಆದ ಕಾಲಕ್ಕೆ ನನ್ನ ತಂದೆ ಜೀವಂತ ಇದ್ದರು ಎನ್ನುತ್ತಾರೆ. ವಿಭಾಗ ಪತ್ರವನ್ನು ಜಿತೇಂದ್ರ ಬರವಣಿಗೆ ಮಾಡಿದ್ದಾರೆ. ವಿಭಾಗ ಪತ್ರದಲ್ಲಿ ಯಾವುದಾದರೂ ದಾರಿ ಸಂಬಂಧ ಯಾವುದೇ ಉಲ್ಲೇಖ ಇಲ್ಲ. ದಾವಾ ಸ್ವತ್ತಿನಲ್ಲಿ ಅಡಿಕೆ, ತೆಂಗು, ರಬ್ಬರ್, ಕಾಳು ಮೆಣಸು, ಕೋಕೊ, ಬಾಳೆ ಮತ್ತು ಗೇರು ಬೆಳೆ ಇದೆ. ನಾನು ದಾವಾ ಸ್ವತ್ತಿನಲ್ಲೇ ಮನೆ ಕಟ್ಟಿಕೊಂಡು ವಾಸ ಇದ್ದೇನೆ. ನಾನು ಮತ್ತು 1 ರಿಂದ 4ನೇ ಪ್ರತಿವಾದಿಗಳು ಒಂದೇ ಕುಟುಂಬದವರು. 1ನೇ ಪ್ರತಿವಾದಿ ನನ್ನ ಅಣ್ಣನ ಮಗ. 1ನೇ ಪ್ರತಿವಾದಿಯ ಆಸ್ತಿ ದಾವಾ ಸ್ವತ್ತಿಗೆ ಹೊಂದಿಕೊಂಡಂತೆ ಇದೆ. 1ನೇ ಪ್ರತಿವಾದಿಯ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 1ನೇ ಪ್ರತಿವಾದಿಯ ಆಸ್ತಿ ನನ್ನ ಆಸ್ತಿಯಿಂದ ಕೆಳಭಾಗದಲ್ಲಿ ಇದ್ದು ಅದು ಸರ್ಕಾರಿ ಆಸ್ತಿ ಎನ್ನುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಸರ್ವೆ ನಂ.365/1 ರ ಹಿಮಕರ ಇವರ ಸ್ವಾಧೀನದಲ್ಲಿ ಇರುವ ಸರ್ಕಾರಿ ಜಾಗ, ಪಶ್ಚಿಮಕ್ಕೆ 1ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇರುವ ಆಸ್ತಿ, ಉತ್ತರಕ್ಕೆ ವಿಜಯಕುಮಾರ ಇವರ ಆಸ್ತಿ ಮತ್ತು ದಕ್ಷಿಣಕ್ಕೆ ಭೊಜಪ್ಪ ಇವರ ಆಸ್ತಿ. ಪಂಚಾಯಿತಿ ರಸ್ತೆಯಿಂದ ನಿಮ್ಮ ಆಸ್ತಿಗೆ ಯಾವ ಆಸ್ತಿ ಮುಖಾಂತರ

ಬರಬೇಕು ಎಂದರೆ ಸಾಕ್ಷಿ ಪಂಚಾಯಿತಿ ರಸ್ತೆ ನನ್ನ ಜಮೀನಿಗೆ ತಾಗಿಕೊಂಡು ಇದೆ ಎನ್ನುತ್ತಾರೆ. ಪಂಚಾಯಿತಿ ರಸ್ತೆ ದಾವಾ ಸ್ವತ್ತಿನ ಯಾವ ದಿಕ್ಕಿನಲ್ಲಿ ಇದೆ ಎಂದರೆ ಸಾಕ್ಷಿ ಪಶ್ಚಿಮ ದಿಕ್ಕಿನಲ್ಲಿ ಇದೆ ಎನ್ನುತ್ತಾರೆ. ಪಂಚಾಯಿತಿ ರಸ್ತೆ ಹಿಮಕರ ಇತನ ಆಸ್ತಿ ಮತ್ತು ವಿಜಯಕುಮಾರ ಇತರ ಆಸ್ತಿಯಲ್ಲಿ ಹಾದು ಹೋಗುತ್ತದೆ. ಈ ದಾವೆಯಲ್ಲಿ ದಾವಾ ಸ್ವತ್ತಿಗೆ ಏನು ಚಕ್ಕುಬಂದಿ ಬರೆಸಿದ್ದೇನೆ ಎಂದರೆ ಸಾಕ್ಷಿ ಸರ್ವೆ ನಂಬರುಗಳು ನೆನಪಿಲ್ಲ ಎನ್ನುತ್ತಾರೆ. ಪಂಚಾಯಿತಿ ರಸ್ತೆ ದಾವಾ ಸ್ವತ್ತಿನಲ್ಲಿ ಹಾದು ಹೋಗುತ್ತದೆ. ಪಂಚಾಯಿತಿ ರಸ್ತೆ 1ನೇ ಪ್ರತಿವಾದಿಯ ಜಾಗದಲ್ಲಿ ಹಾದುಹೋಗಿದಿಯಾ ಎಂದರೆ ಸಾಕ್ಷಿ ನನ್ನ ಜಮೀನು ಮುಖಾಂತರ ಸದರಿಯವರ ಆಸ್ತಿ ಕಡೆ ಹಾದು ಹೋಗಿದೆ ಎನ್ನುತ್ತಾರೆ. ದಾವಾ ಸ್ವತ್ತಿನ ಬಳಿ ಇರುವ ಪಂಚಾಯಿತಿ ರಸ್ತೆ ಮಣ್ಣಿನ ರಸ್ತೆ. ಸಾಕ್ಷಿ ಮುಂದುವರೆದು ಸ್ವಲ್ಪ ಕೆಳಗೆ ರಸ್ತೆಗೆ ಕಾಂಕ್ರಿಟ್ ಹಾಕಲಾಗಿದೆ ಎನ್ನುತ್ತಾರೆ. ಸರ್ವೆ ನಂ.356/151 ರಲ್ಲಿ ಇರುವ ನಮ್ಮ ಮನೆಗೆ ಎಷ್ಟು ಕಡೆಯಿಂದ ದಾರಿ ಇದೆ ಎಂದರೆ ಸಾಕ್ಷಿ ಒಂದು ಕಡೆಯಿಂದ ದಾರಿ ಇದೆ ಎನ್ನುತ್ತಾರೆ. ಪಂಚಾಯಿತಿ ರಸ್ತೆಯನ್ನು ಗ್ರಾಮ ಪಂಚಾಯಿತಿಯವರು ಉಸ್ತುವಾರಿ ಅಥವಾ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಪಂಚಾಯಿತಿ ರಸ್ತೆ ಪೆರಾಜೇ ಗ್ರಾಮದಿಂದ ಪ್ರಾರಂಭವಾಗಿ ಸುತ್ತುವರೆದು ಪೆರಾಜೆ ಗ್ರಾಮಕ್ಕೆ ಬಂದು ಸೇರುತ್ತದೆ. ನಾನು ಹೇಳಿದ ರಸ್ತೆ ಗ್ರಾಮ ನಕಾಶೆಯಲ್ಲಿ ಇರಬಹುದು. ಗ್ರಾಮ ಪಂಚಾಯಿತಿ ರಸ್ತೆ ಸುಮಾರು 15 ಅಡಿ ಅಗಲ ಇದೆ. ನನ್ನ ಜಾಗದಲ್ಲಿ ಸದರಿ ರಸ್ತೆ ಸುಮಾರು 25 ರಿಂದ 30 ಅಡಿ ಉದ್ದ ಹಾದು ಹೋಗಿದೆ. ಪ್ರತಿವಾದಿ ಜಾಗದಲ್ಲಿ ಸುಮಾರು 200 ರಿಂದ 300 ಅಡಿ ಉದ್ದದ ಗ್ರಾಮ ಪಂಚಾಯಿತಿ ರಸ್ತೆ ಹಾದು ಹೋಗಿದೆ. ಸರ್ವೆ ನಂ.256/151 ರ 2.30 ಎಕರೆ ನಲ್ಲೇ ಗ್ರಾಮ ಪಂಚಾಯಿತಿ

ರಸ್ತೆ ಹಾದು ಹೋಗಿದೆ. ದಾವಾ ಸ್ವತ್ತಿನಲ್ಲಿ ಹಾದು ಹೋಗಿರುವ ಪಂಚಾಯಿತಿ ರಸ್ತೆ ಮುಖಾಂತರ ನಾನು, ಪ್ರತಿವಾದಿ ಮತ್ತು ಇತರ 6 ಮನೆಯವರು ಹಾದುಹೋಗುತ್ತೇವೆ. ನನ್ನ ಆಸ್ತಿಯ ಪಕ್ಕದಲ್ಲಿ ಪ್ರತಿವಾದಿ ಆಸ್ತಿ ಇದ್ದು ಪಂಚಾಯಿತಿ ರಸ್ತೆ ಅವರ ಜಾಗದಲ್ಲೂ ಸಹ ಮುಂದುವರೆದಿದೆ.

2. ನನಗೂ ಮತ್ತು ಪ್ರತಿವಾದಿಗಳಿಗೆ ಹೀಗೆ 5 ವರ್ಷಗಳ ಹಿಂದೆ ದಾರಿ ಸಂಬಂಧ ತಕರಾರು ಆಗಿದೆ. ನನಗೂ ಮತ್ತು ಪ್ರತಿವಾದಿಗಳಿಗೆ ದಾರಿ ವಿಚಾರದಲ್ಲಿ ತಕರಾರು ಆಗಿದೆ. ಪ್ರತಿವಾದಿಗಳು ನನ್ನ ಜಾಗದಲ್ಲೇ ಪಂಚಾಯಿತಿ ರಸ್ತೆಯನ್ನು ಮುಚ್ಚಿದ್ದರು. ರಸ್ತೆಯಲ್ಲಿ ನಾನು ವಾಹನ ಓಡಾಡಲು ಪೈಪ್ ಹಾಕಿ ವ್ಯವಸ್ಥೆ ಮಾಡಿದ್ದೆ ಆದರೆ ಪ್ರತಿವಾದಿಗಳು ಪೈಪನ್ನು ಕಿತ್ತು ಹಾಕಿ ಕಡಂಗ ಮಾಡಿದರು. ಯಾವ ದಿನಾಂಕದಂದು ಪ್ರತಿವಾದಿಗಳು ಆ ರೀತಿ ಪೈಪು ತೆಗೆದು ಕಡಂಗ ಮಾಡಿದರು ಎಂದು ಈಗ ನೆನಪಿಲ್ಲ. ಪ್ರತಿವಾದಿಗಳು ಒಮ್ಮೆ ಮಾತ್ರ ಆ ರೀತಿ ಪಂಚಾಯಿತಿ ರಸ್ತೆಯನ್ನು ಮುಚ್ಚಿದ್ದಾರೆ. ಪಂಚಾಯಿತಿಗೆ ಈ ಸಂಬಂಧ ನಾನು ಪುಕಾರು ಕೊಟ್ಟಿದ್ದೇನೆ. ಸಾಕ್ಷಿ ಮುಂದುವರೆದು ಸದರಿ ಪ್ರಾಧಿಕಾರದವರು ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎನ್ನುತ್ತಾರೆ. ನಾನು ಆ ರೀತಿ ಪಂಚಾಯಿತಿಗೆ ದೂರು ಕೊಟ್ಟ ಕಾಲಕ್ಕೆ ಪಂಚಾಯಿತಿಯವರು ಸ್ಥಳ ತನಿಖೆ ಮಾಡಿಲ್ಲ. ನಾನು ಪಂಚಾಯಿತಿಗೆ ಪುಕಾರು ಕೊಟ್ಟ ಸಂಬಂಧ ನನ್ನ ಬಳಿ ಯಾವುದೇ ದಾಖಲೆ ಇಲ್ಲ. 1ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಇರುವ ಪಂಚಾಯಿತಿ ರಸ್ತೆಯಲ್ಲಿ ಓಡಾಡುತ್ತಾರೆ. 1ನೇ ಪ್ರತಿವಾದಿ ತನ್ನ ಮನೆಯಲ್ಲಿ ವಾಹಗಳನ್ನು ಇಟ್ಟಿದ್ದಾರೆ. ಸದರಿ ವಾಹಗಳನ್ನು ದಾವಾ ಸ್ವತ್ತಿನಲ್ಲಿ ಇರುವ ಪಂಚಾಯಿತಿ ರಸ್ತೆಯಲ್ಲಿ ತೆಗೆದುಕೊಂಡು ಹೋಗುತ್ತಾರೆ. 1ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಇರುವ

ಪಂಚಾಯಿತಿ ರಸ್ತೆ ಮುಖಾಂತರ ಓಡಾಡಲು ಮತ್ತು ಕೃಷಿ ಸಲಕರಣೆಗಳನ್ನು ತೆಗೆದುಕೂಂಡು ಹೋಗಲು ಮತ್ತು ಕೃಷಿ ಉತ್ಪನ್ನಗಳನ್ನು ಸಾಗಾಟ ಮಾಡಲು ನನದೇನು ತಕರಾರು ಇಲ್ಲ. 1ನೇ ಪ್ರತಿವಾದಿ ಆಸ್ತಿಯಲ್ಲಿ ಇರುವ ಪಂಚಾಯಿತಿ ರಸ್ತೆ ಮುಖಾಂತರ ನಾನು ಉಪಯೋಗಿಸುವ ಅವಶ್ಯತೆ ಇದೇಯಾ ಎಂದರೆ ಸಾಕ್ಷಿ ಪಂಚಾಯಿತಿ ಜಾಗ ಹೊರೆತು ಪಡಿಸಿ ಅವರ ಜಾಗದಲ್ಲಿ ಹೋಗುವ ಅವಶ್ಯಕತೆ ಇಲ್ಲ ಎನ್ನುತ್ತಾರೆ. ಪಂಚಾಯಿತಿ ರಸ್ತೆ ಎರಡು ಬದಿಯಲ್ಲಿ ದಾವಾ ಸ್ವತ್ತು ಇದೆ. ಪಂಚಾಯಿತಿ ರಸ್ತೆಯನ್ನು ಹೊರೆತು ಪಡಿಸಿ ಪ್ರತಿವಾದಿ ನನ್ನ ಸ್ವಾಧೀನದಲ್ಲಿ ಇರುವ ರಸ್ತೆ ಎರಡು ಬದಿಯಲ್ಲಿ ಇರುವ ದಾವಾ ಸ್ವತ್ತಿಗೆ ಬಂದಿಲ್ಲ. ಪ್ರತಿವಾದಿ ದಾವಾ ಸ್ವತ್ತಿನ ಪೈಕಿ 0.15 ಎಕರೆ ಎಷ್ಟು ಜಾಗವನ್ನು ಉಚ್ಛಾಯಿಸಿಕೂಂಡಿರುತ್ತಾನೆ. 1ನೇ ಪ್ರತಿವಾದಿ ಒತ್ತುವರಿ ಮಾಡಿದ್ದಾನೆ ಎಂದು ಹೇಳಲಾದ ಜಾಗದಲ್ಲಿ ತೋಟ ಇದೆ. 1ನೇ ಪ್ರತಿವಾದಿ ಯಾವಾಗ 0.15 ಎಕರೆ ಎಷ್ಟು ಆಸ್ತಿಯನ್ನು ಒತ್ತುವರಿ ಮಾಡಿದ್ದಾನೆ ಎಂದರೆ ನನ್ನ ತಂದೆ ಖರೀದಿ ಮಾಡುವ ಮೊದಲೇ ಆತ ಉಚ್ಛಾಯಿಸಿಕೊಂಡಿದ್ದಾನೆ ಎನ್ನುತ್ತಾರೆ. ನನ್ನ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ ಪ್ರತಿವಾದಿಗಳ ಬಳಿ ಒತ್ತುವರಿಯನ್ನು ತೆರವು ಮಾಡಿ ಬಿಟ್ಟುಕೊಡಿ ಎಂದು ಕೇಳಿಲ್ಲ. ನೀವು ಪ್ರತಿವಾದಿಗಳನ್ನು ಒತ್ತುವರಿ ತೆರುವಿಗೆ ಕೇಳಿದ್ದೀರಾ ಎಂದರೆ ಸಾಕ್ಷಿ ಈ ದಾವೆಯನ್ನು ಹೂಡಿದ್ದೇನೆ ಎನ್ನುತ್ತಾರೆ. ಈ ದಾವೆಯಲ್ಲಿ ಏನು ಪರಿಹಾರ ಕೇಳಿದ್ದೀರಾ ಎಂದರೆ ಸಾಕ್ಷಿ ಪ್ರತಿವಾದಿಗಳು ಉಚ್ಛಾಯಿಸಿಕೊಂಡಿರುವ ಜಾಗವನ್ನು ಬಿಟ್ಟುಕೊಡಬೇಕು ಮತ್ತು ರಸ್ತೆಗೆ ಅಡ್ಡಿ ಪಡಿಸಬಾರದು ಎಂದು ಪರಿಹಾರ ಕೇಳಿದ್ದೇನೆ ಎನ್ನುತ್ತಾರೆ. ನೀವು ಪಂಚಾಯಿತಿ ರಸ್ತೆಯಲ್ಲಿ ಓಡಾಡಲು ಮತ್ತು ಏನಾದರು ಸಾಗಾಟ ಮಾಡಲು

ಪ್ರತಿವಾದಿಗಳು ಅಡ್ಡಿಪಡಿಸಿದ್ದಾರೆ ಎಂದರೆ ಸಾಕ್ಷಿ ನಾವು ಮನೆ ಕಟ್ಟಲು ಸಾಮಗ್ರಿಗಳನ್ನು ತರುವಾಗ ಪ್ರತಿವಾದಿಗಳು ಗಲಾಟೆ ಮಾಡಿದ್ದರು ಎನ್ನುತ್ತಾರೆ. ಆ ರೀತಿ ನಾನು ಹೀಗೆ 2 ವರ್ಷಗಳ ಹಿಂದೆ ಮನೆ ಕಟ್ಟುತ್ತಿದ್ದಾಗ ಪ್ರತಿವಾದಿಗಳು ಗಲಾಟೆ ಮಾಡಿದರು. ಈ ದಿನವು ಸಹ ನಾನು ಅದೇ ರಸ್ತೆಯಲ್ಲಿ ಬಂದಿರುತ್ತೇನೆ. ನಮ್ಮ ಮನೆಯಲ್ಲಿ ಜೀಪುಗಳು ಇವೆ. ಈಗಲೂ ಸಹ ದಾವಾ ಸ್ವತ್ತಿನಲ್ಲಿ ಇರುವ ಪಂಚಾಯಿತಿ ರಸ್ತೆ ಮಣ್ಣಿನ ರಸ್ತೆ. ಸಾಕ್ಷಿ ಮುಂದುವರೆದು ಕಳೆಭಾಗದಲ್ಲಿ ಕಾಂಕ್ರಿಟ್ ಮಾಡಲಾಗಿದೆ ಎನ್ನುತ್ತಾರೆ.

**ಮುಂದುವರೆದ ಪಾಟಿ ಸವಾಲಿಗೆ ಸಮಾಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.